ನೋಡಿದ್ರಾ?"

"ಇಲ್ಲ. ಅದ್ಯಾಕೆ ನೋಡ್ಬೇಕು?"

"ಏನೋ ಒಂದು ಅನುಮಾನ, ಇರಲಿ ಬಿಡಿ."

ಆ ನಂತರ ಡಿಸೋಜ ಅಲ್ಲಿಂದ ತೆರಳಿದ.

"ನನಗೊಂದು ಅನುಮಾನ. ಬೆಟ್ಟಪ್ಪ ಮತ್ತು ಪಾಲಯ್ಯ ಜೊತೆಯಾಗಿ ಸಂಚು ಮಾಡಿ, ಸೋಮಯ್ಯನನ್ನು ಕೊಂದರೆ? ಡಿಸೋಜನ ಮಾತು ನಿಜವಾದರೆ, ಹಾಗೇ ಆಗಿರಲೇಬೇಕಲ್ಲವೆ?"

"ನನಗೆ ಡಿಸೋಜನ ಮಾತಿನಲ್ಲಿ ಪೂರ್ಣ ವಿಶ್ವಾಸ ಬರ್ತಾ ಇಲ್ಲ. ನೋಡೋಣ, ಬೆರಳಚ್ಚಿನ ವರದಿ ಬರಲಿ."

ಸಂಜೆ ಏಳು ಗಂಟೆಯಾಗುತ್ತಿದ್ದಂತೆ, ಆತ ಕೇರಳದ ಮುಸಲ್ಮಾನ್ ವ್ಯಾಪಾರಿಯಂತೆ ವೇಷ ಧರಿಸಿಕೊಂಡು ಹೊರಬಿದ್ದ.

★★★

ಮೂರು ದಿನಗಳ ನಂತರ ರಾತ್ರಿ ವಿಪರೀತ ಮಳೆ ಸುರಿಯುತ್ತಿತ್ತು. ಹತ್ತರ ಹೊತ್ತಿಗೆ ಯಾರೋ ಕರೆಗಂಟೆ ಬಾರಿಸಿದರು. ನಾನು ಕದ ತೆರೆದೆ. ಗಿರಿಜಾ ಮೀಸೆಯ ಎತ್ತರದ ಅಪರಿಚಿತ ನಿಂತಿದ್ದ. ಆತನ ಮೊಗದಲ್ಲಿ ಭೀತಿ. ಆತ ಗೂಳಿಯಂತೆ ಒಳಕ್ಕೆ ನುಗ್ಗಿದ.

"ನಿಮ್ಮಲ್ಲಿ ಕರಮಚಂದ ಯಾರು? ನಾನೀಗ ದೊಡ್ಡ ತೊಂದರೆಲಿ ಸಿಕ್ಕಿ ಹಾಕಿಕೊಂಡಿದ್ದೇನೆ."

"ಓಹ್! ಬೆಟ್ಟಪ್ಪ!! ಏನು ಈ ರಾತ್ರಿಲಿ ಓಡಿ ಬಂದಿದ್ದು? ಪೊಲೀಸರು ಹಿಡಿಯೋಕೆ ಬಂದರೆ?"

ಸಿಸಿಟೀವಿ ಫೂಟೇಜಲ್ಲಿ ಆತನನ್ನು ಕರಮಚಂದ ಕಂಡಿದ್ದ ಅಂತ ಊಹಿಸಿದೆ.

"ನನ್ಗೆ ಸುದ್ದಿ ಸಿಕ್ತು ಸಾರ್. ಸ್ಟೇಶನ್ನಿನಲ್ಲಿ ನನ್ನ ಫ್ರೆಂಡ್ ಒಬ್ಬ ಇದ್ದಾನೆ. ಫೋನು ಮಾಡಿ ತಿಳಿಸ್ದ. ನಾನು ಸೋಮಯ್ಯನ ಕೊಲೆ ಮಾಡಿಲ್ಲ ಸಾರ್..."

"ಹಾಗಿದ್ರೆ ನೀನ್ಯಾಕೆ ಹೆದರುತ್ತೀ?"

"ಆದ್ರೆ ನನ್ ವಿರುದ್ಧ ಸಾಕ್ಷಿ ಇದೆಯಂತೆ... ರಿವಾಲ್ವರಿನಲ್ಲಿ ನನ್ ಬೆರಳಚ್ಚು ಇದೆಯಂತೆ ಅಂತ ಅವ್ನು ಹೇಳ್ದ... ಆದ್ರೆ ಕಳೆದ ವಾರ ಸೋಮಯ್ಯ ರಿವಾಲ್ವರ್ ಮಾರುತ್ತೀನಿ ಅಂತಂದ್ರು. ಅದಿಕ್ಕೇ ಕೊಂಡುಕೊಳ್ಳಲು ಒಮ್ಮೆ ಅದನ್ನು ಹಿಡಿದು ಪರೀಕ್ಷಿಸಿದ್ದೆ. ಆ ಗುರುತುಗಳು ಅಲ್ಲಿ ಮೂಡಿರಬಹುದು, ಅಷ್ಟೇ. ಆದ್ರೆ ಅದ್ಕೆ ನನ್ನಲ್ಲಿ ಸಾಕ್ಷ್ಯ ಇಲ್ಲ..."

ಅಷ್ಟರಲ್ಲಿ ಹೆಜ್ಜೆ ಸಪ್ಪಳ ಕೇಳಿಬಂತು. ಕೆಲ ಕ್ಷಣಗಳಲ್ಲಿ ಡಿಸೋಜ ಮತ್ತು ಕೆಲವು ಪೊಲೀಸರು ಒಳಗೆ ಪ್ರವೇಶಿಸಿದರು.

"ನೀನು ಓಡಿ ಹೋಗ್ತೀ ಅಂತ ಅನುಮಾನವಿತ್ತು. ಅದಿಕ್ಕೇ ನಿನ್ನ ಹಿಂದೆ ಜನ ಬಿಟ್ಟಿದ್ದೆ. ಆದರೆ ನೀನು ಇಲ್ಲಿಗೆ ಬರ್ತೀ ಅಂತ ಊಹಿಸಲಿಲ್ಲ. ನಮ್ ಕೆಲ್ಸ ಸುಲಭವಾಯ್ತು, ಬಿಡು... ಸಾರ್, ಬೆರಳಚ್ಚು ಇವನದ್ದೇ ಅಂತ ವರದಿ ಬಂದಿದೆ..."

"ಆದ್ರೆ ಬೆಟ್ಟಪ್ಪ ತಾನು ರಿವಾಲ್ವರ್ ಖರೀದಿಗೋಸ್ಕರ ಒಮ್ಮೆ ಮುಟ್ಟಿದ್ದೆ. ಅದರಿಂದಾಗಿ ಗುರುತುಗಳಿವೆ ಅಂತಾನೆ..."

"ಸೋಮಯ್ಯನನ್ನು ಕೊಲ್ಲೋ ಉದ್ದೇಶದಿಂದ ಪಕ್ಕದ ಕಟ್ಟಡದ ಕೋಣೆ ಬಾಡಿಗೆ ಪಡೆದು, ಅಲ್ಲಿ ಕಿಟಕಿಗೆ ಕಲ್ಲುಗಳನ್ನು ಮುಚ್ಚಿ, ಅಲ್ಲಿಂದಲೇ ಗುಂಡು ಹಾರಿಸಿ, ಕೊಂದಿದ್ದಾನೆ. ತನ್ನ ಕೇಸನ್ನು ಸರಿಯಾಗಿ ನಿರ್ವಹಿಸಲಿಲ್ಲ ಅನ್ನೋದು ಕೊಲೆಗೆ ಮೋಟಿವ್. ಇಷ್ಟು ಸಾಲದೆ ಬೆಟ್ಟಪ್ಪನನ್ನು ನೇಣಿಗೆ ಹಾಕಿಸಲು?"

"ಕೊಲೆ ಎಷ್ಟು ಹೊತ್ತಿಗೆ ಆಗಿದೆ, ಇನ್‌ಸ್ಪೆಕ್ಟರ್?"